**All India Radio: Bangalore**
**National Bulletin In Kannada**
**05.04.2025  13.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**05.04.2025  13.10 p.m.**

**<><><><>**

ಮುಖ್ಯಾಂಶಗಳು

1. ವಲಸೆ ಮತ್ತು ವಿದೇಶಿಯರ ಮಸೂದೆ ೨೦೨೫ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಕಿತ
2. ಪ್ರಧಾನಿ ನರೇಂದ್ರ ಮೋದಿ ಶ್ರೀಲಂಕಾ ಅಧ್ಯಕ್ಷರ ನಡುವೆ ನಿಯೋಗ ಮಟ್ಟದ ಮಾತುಕತೆ; ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಬಲವರ್ಧನೆಗೆ ಒತ್ತು
3. ದೇಶಾದ್ಯಂತ ಇಂದು ರಾಷ್ಟ್ರೀಯ ಕಡಲ ದಿನ ಆಚರಣೆ; ಭಾರತದ ಶ್ರೀಮಂತ ಕಡಲ ಇತಿಹಾಸದ ಸ್ಮರಣೆ
4. ವಿಶ್ವಕಪ್ ಬಾಕ್ಸಿಂಗ್; ಪುರುಷರ ೬೫ ಕೆಜಿ ವಿಭಾಗದಲ್ಲಿ ಭಾರತದ ಅಭಿನಾಶ್ ಜಮ್ವಾಲ್ ಫೈನಲ್‌ಗೆ ಲಗ್ಗೆ
5. ಐಪಿಎಲ್ ಟಿ-೨೦ ಕ್ರಿಕೆಟ್; ಇಂದು ಚೆನ್ನೈ ಸೂಪರ್ ಕಿಂಗ್ಸ್ - ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಪಂಜಾಬ್ ಕಿಂಗ್ಸ್-ರಾಜಸ್ಥಾನ್ ರಾಯಲ್ಸ್ ತಂಡಗಳ ಹಣಾಹಣಿ

<><><><>

ಭಾರತದಲ್ಲಿ ವಿದೇಶಿಯರ ವಲಸೆ, ಪ್ರವೇಶ ಮತ್ತು ವಾಸ್ತವ್ಯವನ್ನು ನಿಯಂತ್ರಿಸಲು ಉದ್ದೇಶಿಸಿರುವ ವಲಸೆ ಮತ್ತು ವಿದೇಶಿಯರ ಮಸೂದೆ ೨೦೨೫ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದಾರೆ. ಈ ಕಾಯ್ದೆಯು ಪಾಸ್‌ಪೋರ್ಟ್ - ಭಾರತಕ್ಕೆ ಪ್ರವೇಶ ಕಾಯ್ದೆ - ೧೯೨೦, ವಿದೇಶಿಯರ ನೋಂದಣಿ ಕಾಯ್ದೆ ೧೯೩೯, ವಿದೇಶಿಯರ ಕಾಯ್ದೆ ೧೯೪೬ ಮತ್ತು ವಲಸೆ ಕಾಯ್ದೆ ೨೦೦೦ ಗಳನ್ನು ರದ್ದುಗೊಳಿಸುತ್ತದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಾಯ್ಲರ್‌ಗಳನ್ನು ನಿಯಂತ್ರಿಸಲು ಮತ್ತು ಸ್ಟೀಮ್ ಬಾಯ್ಲರ್ ಸ್ಫೋಟದ ಅಪಾಯದಿಂದ ಜೀವ ಮತ್ತು ಆಸ್ತಿರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಉದ್ದೇಶಿಸಿರುವ ಬಾಯ್ಲರ್ ಮಸೂದೆ ೨೦೨೪ ಕ್ಕೆ ಸಹ ಅಂಕಿತ ಹಾಕಿದ್ದಾರೆ. ಇದು ೧೯೨೩ ರ ಬಾಯ್ಲರ್ ಕಾಯ್ದೆಯನ್ನು ರದ್ದುಗೊಳಿಸುತ್ತದೆ.

<><><><>

ಶ್ರೀಲಂಕಾ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ಕೊಲಂಬೊದಲ್ಲಿಂದು ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸ್ಸಾನಾಯಕೆ ಅವರೊಂದಿಗೆ ನಿಯೋಗ ಮಟ್ಟದ ಮಾತುಕತೆ ನಡೆಸಿದರು. ಈ ವೇಳೆ ಇಂಧನ, ವ್ಯಾಪಾರ, ಸಂಪರ್ಕ, ಡಿಜಿಟಲೀಕರಣ ಮತ್ತು ರಕ್ಷಣಾ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಸಹಕಾರ ಬಲವರ್ಧನೆ ಕುರಿತಂತೆ ಮಾತುಕತೆ ನಡೆಲಾಯಿತು ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೊಲಂಬೋದ ಐತಿಹಾಸಿಕ ಸ್ವಾತಂತ್ರ್ಯ ಚೌಕದಲ್ಲಿ ಶ್ರೀಲಂಕಾ ಅಧ್ಯಕ್ಷರು ಸಾಂಪ್ರದಾಯಿಕ ಸ್ವಾಗತ ಕೋರಿದರು. ಸಭೆಯ ಬಳಿಕ ವಿವಿಧ ಕ್ಷೇತ್ರಗಳಲ್ಲಿ ಭಾರತ ಅನುದಾನಿತ ಹಲವಾರು ಉಪಕ್ರಮಗಳನ್ನು ಘೋಷಿಸಲಾಗುವುದು. ವಿವಿಧ ಒಪ್ಪಂದಗಳಿಗೆ ಸಹಿ ಮತ್ತು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವುದರ ಜೊತೆಗೆ, ಉಭಯ ನಾಯಕರು ಸಂಪೂರ್ ಸೌರಶಕ್ತಿ ಯೋಜನೆಯ ಶಿಲಾನ್ಯಾಸ ಸಮಾರಂಭದಲ್ಲಿ ವರ್ಚುವಲ್ ಮೂಲಕ ಭಾಗವಹಿಸಲಿದ್ದಾರೆ. ಭೇಟಿಯ ಭಾಗವಾಗಿ ಪ್ರಧಾನಿ, ಭಾರತೀಯ ಶಾಂತಿಪಾಲನಾ ಪಡೆಗಳ ಹುತಾತ್ಮ ಯೋಧರಿಗೆ ಐಪಿಕೆಎಫ್ ಸ್ಮಾರಕದಲ್ಲಿ ಗೌರವ ಸಲ್ಲಿಸಲಿದ್ದಾರೆ. ದ್ವೀಪ ರಾಷ್ಟ್ರ ಶ್ರೀಲಂಕಾಕ್ಕೆ ಮೂರು ದಿನಗಳ ಭೇಟಿಗಾಗಿ ಪ್ರಧಾನಿ ನಿನ್ನೆ ಸಂಜೆ ಶ್ರೀಲಂಕಾ ರಾಜಧಾನಿ ತಲುಪಿದರು. ಅಧ್ಯಕ್ಷ ದಿಸ್ಸಾನಾಯಕೆ ಅವರ ಸಂಪುಟದ ಸಚಿವರು ಬಂಡರನಾಯಕೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅವರನ್ನು ಬರಮಾಡಿಕೊಂಡರು.

<><><><>

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ನಾಲ್ಕು ಮಲ್ಟಿಟ್ರ್ಯಾಕಿಂಗ್ ರೈಲು ಯೋಜನೆಗಳು ಮತ್ತು ವೈಬ್ರೆಂಟ್ ವಿಲೇಜಸ್ ಪ್ರೋಗ್ರಾಂ-೨ಅನ್ನು ಅನುಮೋದಿಸುವ ಸಂಪುಟ ನಿರ್ಧಾರಗಳನ್ನು ಶ್ಲಾಘಿಸಿದ್ದಾರೆ. ಸಾಮಾಜಿಕ ಮಾಧ್ಯಮದ ಸರಣಿ ಪೋಸ್ಟ್ ಗಳಲ್ಲಿ ಅವರು, ಮಲ್ಟಿಟ್ರ್ಯಾಕ್ ರೈಲು ಯೋಜನೆಗಳು ದೇಶದ ಸಂಪರ್ಕ ಮೂಲಸೌಕರ್ಯವನ್ನು ಸುಧಾರಿಸುತ್ತದೆ, ಅನುಕೂಲತೆಯನ್ನು ಹೆಚ್ಚಿಸುತ್ತದೆ, ಸರಕು ವೆಚ್ಚವನ್ನು ಕಡಿಮೆ ಮಾಡುತ್ತದೆ ಮತ್ತು ಪೂರೈಕೆ ಸರಪಳಿಗಳನ್ನು ಬಲಪಡಿಸುತ್ತದೆ ಎಂದು ಹೇಳಿದ್ದಾರೆ. ಗಡಿ ಗ್ರಾಮಗಳ ನಿವಾಸಿಗಳಿಗೆ ಉತ್ತಮ ಗುಣಮಟ್ಟದ ಜೀವನವನ್ನು ಖಚಿತಪಡಿಸಿಕೊಳ್ಳಲು ವೈಬ್ರೆಂಟ್ ವಿಲೇಜಸ್ ಪ್ರೋಗ್ರಾಂ-೨ಗೆ ಸಂಪುಟ ಅನುಮೋದನೆ ನೀಡಿರುವುದು ಶ್ಲಾಘನೀಯ ಎಂದು ಅವರು ಹೇಳಿದರು. ಈ

ಅನುಮೋದನೆಯೊಂದಿಗೆ, ವೈಬ್ರೆಂಟ್ ವಿಲೇಜಸ್ ಪ್ರೋಗ್ರಾಂ-೧ ಕ್ಕೆ ಹೋಲಿಸಿದರೆ, ಇದರಲ್ಲಿ ಒಳಗೊಂಡಿರುವ ಹಳ್ಳಿಗಳ ವ್ಯಾಪ್ತಿಯನ್ನು ವಿಸ್ತರಿಸಲಾಗುತ್ತಿದೆ ಎಂದು ಪ್ರಧಾನಿ ತಿಳಿಸಿದ್ದಾರೆ.

<><><><>

ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ್ ರಾಂ ಅವರ ೧೧೮ನೇ ಜನ್ಮದಿನಾಚರಣೆ ಇಂದು. ದೇಶಾದ್ಯಂತ ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಅನೇಕ ಗಣ್ಯರು ಡಾ. ಬಾಬು ಜಗಜೀವನ್ ರಾಂ ಅವರ ಜನ್ಮ ದಿನಾಚರಣೆ ಅಂಗವಾಗಿ ಗೌರವ ನಮನ ಸಲ್ಲಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಡಾ. ಬಾಬು ಜಗಜೀವನ್ ರಾಂ ಅವರು ಸಮಾಜದ ಶೋಷಿತ ಮತ್ತು ತುಳಿತಕ್ಕೊಳಗಾದವರ ಹಕ್ಕುಗಳಿಗಾಗಿ ಕೈಗೊಂಡ ಹೋರಾಟ ಎಲ್ಲರಿಗೂ ಸದಾ ಸ್ಫೂರ್ತಿದಾಯಕವಾಗಿದೆ ಎಂದು ಹೇಳಿದ್ದಾರೆ.

<><><><>

ಉಜ್ಬೇಕಿಸ್ತಾನದ ತಾಷ್ಕೆಂಟ್‌ನಲ್ಲಿ ಇಂದಿನಿಂದ ಆರಂಭವಾಗಲಿರುವ ಅಂತರ್ ಸಂಸದೀಯ ಒಕ್ಕೂಟ - ಐಪಿಯುನ ೧೫೦ನೇ ಸಭೆಯಲ್ಲಿ ಭಾರತೀಯ ನಿಯೋಗ ಪಾಲ್ಗೊಳ್ಳುತ್ತಿದ್ದು, ಅದರ ನೇತೃತ್ವವನ್ನು ಲೋಕಸಭಾಧ್ಯಕ್ಷ ಓಂ ಬಿರ್ಲಾ ವಹಿಸಲಿದ್ದಾರೆ. ಸಾಮಾಜಿಕ ಅಭಿವೃದ್ಧಿ ಮತ್ತು ನ್ಯಾಯಕ್ಕಾಗಿ ಸಂಸದೀಯ ಕ್ರಮ ಎಂಬ ವಿಷಯದ ಬಗ್ಗೆ ಉನ್ನತ ಮಟ್ಟದ ಚರ್ಚೆಯಲ್ಲಿ ಓಂ ಬಿರ್ಲಾ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ನಿಯೋಗದಲ್ಲಿ ರಾಜ್ಯಸಭಾ ಉಪಾಧ್ಯಕ್ಷ ಹರಿವಂಶ್ ಮತ್ತು ಭರ್ತೃಹರಿ ಮೆಹ್ತಾಬ್, ಅನುರಾಗ್ ಸಿಂಗ್ ಠಾಕೂರ್, ಡಾ. ಸಸ್ಮಿತ್ ಪಾತ್ರ, ಅಶೋಕ್ ಕುಮಾರ್ ಮಿತ್ತಲ್, ಕಿರಣ್ ಚೌಧರಿ ಮತ್ತು ಲತಾ ವಾಂಖೆಡೆ ಇದ್ದಾರೆ. ಭಾರತೀಯ ಸಂಸದೀಯ ನಿಯೋಗ ಐಪಿಯುನ ವಿವಿಧ ಸಂಸ್ಥೆಗಳಲ್ಲಿ ಆಡಳಿತ ಮಂಡಳಿ, ಕಾರ್ಯಕಾರಿ ಸಮಿತಿ, ಸ್ಥಾಯಿ ಸಮಿತಿ ಸಭೆ ಸೇರಿದಂತೆ ವಿವಿಧ ವಿಷಯಾಧಾರಿತ ಚರ್ಚೆಗಳಲ್ಲಿ ಪಾಲ್ಗೊಳ್ಳಲಿದೆ. ತಮ್ಮ ಭೇಟಿಯ ವೇಳೆ ಲೋಕಸಭಾಧ್ಯಕ್ಷ ಓಂ ಬಿರ್ಲಾ, ಉಜ್ಬೇಕಿಸ್ತಾನದಲ್ಲಿರುವ ಭಾರತೀಯ ಸಮುದಾಯದ ಸದಸ್ಯರು ಹಾಗೂ ಭಾರತೀಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

<><><><>

ಇಂದು ದೇಶಾದ್ಯಂತ ರಾಷ್ಟ್ರೀಯ ಕಡಲ ದಿನವನ್ನು ಆಚರಿಸಲಾಗುತ್ತಿದೆ. ದೇಶದ ಆರ್ಥಿಕತೆ, ರಕ್ಷಣೆ ಮತ್ತು ವ್ಯಾಪಾರದಲ್ಲಿ ಕಡಲ ಉದ್ಯಮ ವಹಿಸುವ ಪಾತ್ರವನ್ನು ಗುರುತಿಸಲು ಮತ್ತು ಗೌರವಿಸಲು ಪ್ರತಿ ವರ್ಷ ಏಪ್ರಿಲ್ ೫ ರಂದು ಈ ದಿನವನ್ನು ಆಚರಿಸಲಾಗುತ್ತದೆ. ಕಡಲ ಕಾರ್ಯಾಚರಣೆಗಳ ಮಹತ್ವವನ್ನು ಎತ್ತಿ ತೋರಿಸುವ ಗುರಿಯನ್ನು ಈ ದಿನ ಹೊಂದಿದ್ದು, ಸಮುದ್ರದ ತೀಕ್ಷ್ಣ ವಾತಾವರಣದಲ್ಲಿ ದೀರ್ಘಕಾಲ ಇದ್ದು, ಹೋರಾಡುವವರಿಗೆ ಕೃತಜ್ಞತೆ ವ್ಯಕ್ತಪಡಿಸುವ ದಿನವೂ ಇದಾಗಿದೆ. ಕಡಲ ದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ, ಭಾರತದ ಶ್ರೀಮಂತ ಕಡಲ ಇತಿಹಾಸ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಈ ವಲಯ ವಹಿಸಿರುವ ಪಾತ್ರವನ್ನು ಸ್ಮರಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವ ವಿಡಿಯೋ ಸಂದೇಶದಲ್ಲಿ ಅವರು, ಕಳೆದ ಹತ್ತು ವರ್ಷಗಳಲ್ಲಿ ನವ ಭಾರತ - ಕಡಲ ವಲಯದಲ್ಲಿ ಹೊಸ ಮೈಲಿಗಲ್ಲನ್ನು ಸಾಧಿಸಿದ್ದು, ದೇಶದ ಪ್ರಗತಿಗೆ ಪೂರಕವಾಗುವಂತೆ ಕಡಲ ಪರಿಸರ ವ್ಯವಸ್ಥೆಯನ್ನು ಮತ್ತು ಬಂದರುಗಳನ್ನು ಬಲಪಡಿಸಲು ಕೇಂದ್ರ ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದೆ ಎಂದಿದ್ದಾರೆ. ಕೇಂದ್ರ ಸಚಿವ ಸರ್ಬಾನಂದ ಸೋನೋವಾಲ್ ಇಂದು ನವದೆಹಲಿಯಲ್ಲಿ ೬೨ ನೇ ರಾಷ್ಟ್ರೀಯ ಕಡಲ ದಿನದ ಸ್ಮರಣಾರ್ಥ ಕಡಲ ಜಾಗೃತಿ ನಡಿಗೆಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಸಚಿವರು, ದೇಶದ ಪ್ರತಿಯೊಬ್ಬ ನಾಗರಿಕರು ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವಲ್ಲಿ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

****ಧ್ವನಿ***ಸರ್ಬಾನಂದ ಸೋನೋವಾಲ್

<><><>

ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಕಾರವಾರದ ನೌಕಾನೆಲೆಗೆ ಇಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಭೇಟಿ ನೀಡಲಿದ್ದಾರೆ. ಐ.ಎನ್.ಎಸ್ ಕದಂಬ ನೌಕಾನೆಲೆಗೆ ಆಗಮಿಸಲಿರುವ ರಕ್ಷಣಾ ಸಚಿವರು, ಇಂಡಿಯನ್ ಓಶಿಯನ್ ಶಿಪ್ 'ಸಾಗರ'ಕ್ಕೆ ಚಾಲನೆ ನೀಡಲಿದ್ದಾರೆ. ನಂತರ ಸೀಬರ್ಡ್ ಪ್ರಾಜೆಕ್ಟ್‌ನ ವಿವಿಧ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ ಎಂದು ಭಾರತೀಯ ನೌಕಾದಳದ ಪ್ರಕಟಣೆ ತಿಳಿಸಿದೆ.

<><><>

ಪಂಜಾಬ್ ರಾಜ್ಯ, ಗೋಧಿ ಖರೀದಿಗೆ ಸಜ್ಜಾಗಿದ್ದು, ಈ ಖರೀದಿ ಋತುವಿನಲ್ಲಿ ೮ ಲಕ್ಷಕ್ಕೂ ಹೆಚ್ಚು ರೈತರಿಗೆ ಅನುಕೂಲ ಕಲ್ಪಿಸಲು ಸಿದ್ಧವಾಗಿದೆ. ಸರ್ಕಾರ ಈ ಬಾರಿ ೧೨೪ ಲಕ್ಷ ಮೆಟ್ರಿಕ್ ಟನ್ ಗೋಧಿ

ಸಂಗ್ರಹಿಸುವ ಗುರಿ ಹೊಂದಿದೆ. ಜಲಂಧರ್, ಹೋಶಿಯಾರ್‌ಪುರ, ಕಪುರ್ತಲಾ ಮತ್ತು ಶಹೀದ್ ಭಗತ್ ಸಿಂಗ್ ನಗರ ಜಿಲ್ಲೆಗಳ ಹಿರಿಯ ಅಧಿಕಾರಿಗಳೊಂದಿಗೆ ನಡೆದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ ನಂತರ ರಾಜ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಲಾಲ್ ಚಂದ್ ಕಟರುಚಕ್, ಮಾಧ್ಯಮಗಳೊಂದಿಗೆ ಮಾತನಾಡಿ, ಗೋಧಿ ಸಂಗ್ರಹಣೆಗಾಗಿ ಸರ್ಕಾರ ಈಗಾಗಲೇ ೨೮ ಸಾವಿರದ ೮೯೪ ಕೋಟಿ ರೂಪಾಯಿಗಳ ನಗದು ಸಾಲ ಮಿತಿಯನ್ನು ಪಡೆದುಕೊಂಡಿದೆ ಎಂದು ಹೇಳಿದರು.

<><><><>

ಮುಂದಿನ ನಾಲ್ಕರಿಂದ ಐದು ದಿನಗಳಲ್ಲಿ ಭಾರತದ ವಾಯವ್ಯ ಭಾಗಗಳಲ್ಲಿ ಬಿಸಿಗಾಳಿ ಪರಿಸ್ಥಿತಿ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ. ಮುಂದಿನ ಎರಡು ದಿನಗಳ ವರೆಗೆ ಹಿಮಾಚಲಪ್ರದೇಶದ ಕೆಲವೆಡೆ ಇದೇ ೯ರ ವರೆಗೆ ದೆಹಲಿ, ಹರಿಯಾಣ, ರಾಜಸ್ತಾನ, ಪಶ್ಚಿಮ ಉತ್ತರ ಪ್ರದೇಶ, ಪಂಜಾಬ್ ಮತ್ತು ಗುಜರಾತ್‌ನಲ್ಲಿ ಬಿಸಿಗಾಳಿ ಪರಿಸ್ಥಿತಿ ಮುಂದುವರಿಯಲಿದೆ.

<><><><>

ಬ್ರೆಜಿಲ್‌ನಲ್ಲಿ ನಡೆದ ವಿಶ್ವ ಕಪ್ ಬಾಕ್ಸಿಂಗ್‌ನ ಪುರುಷರ ೬೫ ಕೆಜಿ ವಿಭಾಗದಲ್ಲಿ, ಭಾರತದ ಅಭಿನಾಶ್ ಜಮ್ವಾಲ್ ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ರೆಡ್ ಕಾರ್ನರ್‌ನಿಂದ ಸ್ಪರ್ಧಿಸಿದ ಜಮ್ವಾಲ್ ನಿನ್ನೆ ರಾತ್ರಿ ನಡೆದ ಪಂದ್ಯದಲ್ಲಿ ಇಟಲಿಯ ಜಿಯಾನ್ಲುಯಿಗಿ ಮಲಂಗಾ ವಿರುದ್ಧ ೫-೦ ಅಂತರದ ಗೆಲುವು ಸಾಧಿಸಿದರು. ಇಂದು ನಡೆಯುವ ಫೈನಲ್‌ನಲ್ಲಿ ಜಮ್ವಾಲ್ ಬ್ರೆಜಿಲ್‌ನ ಯೂರಿ ರೀಸ್ ಅವರನ್ನು ಎದುರಿಸಲಿದ್ದಾರೆ. ಈ ನಡುವೆ, ಪುರುಷರ ೭೦ ಕೆಜಿ ವಿಭಾಗದ ಫೈನಲ್ ಪಂದ್ಯದಲ್ಲಿ, ಭಾರತದ ಹಿತೇಶ್ ಇಂಗ್ಲೆಂಡ್‌ನ ಒಡೆಲ್ ಕಮಾರಾ ಅವರನ್ನು ಎದುರಿಸಲಿದ್ದಾರೆ. ಇದಕ್ಕೂ ಮೊದಲು ಪುರುಷರ ೫೫ ಕೆಜಿ ವಿಭಾಗದಲ್ಲಿ, ಭಾರತದ ಬಾಕ್ಸರ್ ಮನೀಶ್ ರಾಥೋಡ್ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಸೆಮಿಫೈನಲ್‌ನಲ್ಲಿ ರಾಥೋಡ್,ಕಜಕಿಸ್ತಾನದ ನರ್ಸುಲ್ತಾನ್ ಅಲ್ಟಿನ್‌ಬೆಕ್ ವಿರುದ್ಧ ೦-೫ ಅಂತರದಲ್ಲಿ ಪರಾಭವಗೊಂಡರು.

<><><><>

ಐಪಿಎಲ್ ಟಿ-೨೦ ಕ್ರಿಕೆಟ್ ಟೂರ್ನಿಯಲ್ಲಿಂದು ಎರಡು ಪಂದ್ಯಗಳು ನಡೆಯಲಿದ್ದು, ಚೆನ್ನೈನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಅಪರಾಹ್ನ ೩.೩೦ಕ್ಕೆ

ಆರಂಭವಾಗಲಿದೆ. ಪಂಜಾಬ್‌ನ ತಿರಾದಲ್ಲಿ ನಡೆಯಲಿರುವ ದಿನದ ಎರಡನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಹಾಗೂ ರಾಜಸ್ಥಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ. ಉತ್ತರ ಪ್ರದೇಶದ ಏಕನಾ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಲಖನೌ ಸೂಪರ್ ಜೈಂಟ್ಸ್ ೧೨ ರನ್‌ಗಳ ಗೆಲುವು ಸಾಧಿಸಿದೆ.

<><><><>

ಅರ್ಜೆಂಟೀನಾದ ಬ್ಯೂನಸ್ ಐರಿಸ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನ ಮಹಿಳೆಯರ ೫೦ ಮೀಟರ್ ರೈಫಲ್ ಥ್ರಿ-ಪೊಸಿಷನ್ಸ್ ಸ್ಪರ್ಧೆಯಲ್ಲಿ ಭಾರತದ ಸಿಫ್ಟ್ ಕೌರ್ ಸಮ್ರಾ ಚಿನ್ನದ ಪದಕ ಗೆದ್ದಿದ್ದಾರೆ. ಮತ್ತೊಂದೆಡೆ, ಏಷ್ಯನ್ ಗೇಮ್ಸ್ ಪದಕ ವಿಜೇತ ಶೂಟರ್ ಚೈನ್ ಸಿಂಗ್ ಪುರುಷರ ವಿಭಾಗದಲ್ಲಿ ಕಂಚಿನ ಪದಕ ಗೆದ್ದು, ಸ್ಪರ್ಧೆಯಲ್ಲಿ ಭಾರತದ ಪದಕ ಖಾತೆಯನ್ನು ತೆರೆದರು. ೨೩ ವರ್ಷದ ಸಿಫ್ಟ್ ಫೈನಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ, ೪೫೮.೬ ಅಂಕಗಳೊಂದಿಗೆ ತಮ್ಮ ಮೊದಲ ವಿಶ್ವಕಪ್ ಚಿನ್ನದ ಪದಕ ಗೆದ್ದರು. ಜರ್ಮನಿಯ ಅನಿತಾ ಮಂಗೋಲ್ಡ್ ೪೫೫.೩ ಅಂಕಗಳೊಂದಿಗೆ ಬೆಳ್ಳಿ ಗೆದ್ದರೆ, ಕಝಾಕಿಸ್ತಾನ್‌ನ ಅರಿನಾ ಅಲ್ತುಖೋವಾ ೪೪೫.೯ ಅಂಕಗಳೊಂದಿಗೆ ಕಂಚಿನ ಪದಕ ಗೆದ್ದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>